ತಲೆಯವರಿಗೆ ಪೂರ್ತಿ ಕಲ್ಲಾಗುತ್ತಾರೆ' ಎಂದಿತು ಮೂರನೆಯ ಕಾಗೆ. ತಕ್ಷಣ ಎಲ್ಲ ಕಾಗೆಗಳೂ ಹಾರಿಹೋದವು. ಜಾನ್ ತುಂಬಾ ದುಃಖಿತನಾದನು. ಅವರು ರಾಜ್ಯ ತಲುಪಿದ ಕೂಡಲೇ ಎಲ್ಲವೂ ಕಾಗೆಗಳು ಹೇಳಿದಂತೆಯೇ ನಡೆಯಿತು. ಜಾನ್ ಮೂರು ಬಾರಿಯೂ ರಾಜಕುಮಾರನನ್ನು ಗಂಡಾಂತರದಿಂದ ಪಾರು ಮಾಡಿದನು.

ಆದರೆ ರಾಜಕುಮಾರನಿಗೆ ಅವನ ವಿಚಿತ್ರ ನಡೆವಳಿಕೆಗೆ ಕಾರಣ ತಿಳಿಯದೆ ತುಂಬಾ ಸಿಟ್ಟು ಬಂದು ಅವನ ತಲೆ ಕಡಿದುಬಿಡುವಂತೆ ಆಜ್ಞೆ ಮಾಡಿದನು. ಆಗ ಜಾನ್ ದುಃಖದಿಂದ 'ರಾಜಕುಮಾರ ನೀವು ನನ್ನನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದೀರಿ. ನಾನು ಕೇವಲ ಸ್ವಾಮಿ ನಿಷ್ಠೆಯಿಂದ ಈ ಕೆಲಸಗಳನ್ನು ಮಾಡಬೇಕಾಯಿತು' ಎಂದು ಕಾಗೆಗಳು ಮಾತನಾಡಿಕೊಂಡಿದ್ದೆಲ್ಲವನ್ನೂ ಹೇಳಿಬಿಟ್ಟನು. ಕೂಡಲೇ ರಾಜಕುಮಾರ, 'ಅಯ್ಯೋ ಜಾನ್ ನನ್ನನ್ನು ಕ್ಷಮಿಸು, ಕ್ಷಮಿಸು. ಅವನನ್ನು ಬಿಟ್ಟುಬಿಡಿ' ಎಂದು ಕೂಗುತ್ತಿರುವಾಗಲೇ ಜಾನ್ ಕಾಲಿನಿಂದ ತಲೆಯವರೆಗೆ ಕಲ್ಲಾಗಿ ಕೆಳಗೆಬಿದ್ದನು.

ರಾಜಕುಮಾರನಿಗೆ ಎದೆ ಒಡೆದಂತಾಯಿತು. ಅವನು ತುಂಬಾ ದುಃಖದಿಂದ ಆ ಕಲ್ಲಿನ ಪ್ರತಿಮೆಯನ್ನು ತೆಗೆಸಿ ನನ್ನ ಕೋಣೆಯ ಬಾಗಿಲಲ್ಲಿರಿಸಿಕೊಂಡನು. ಅದನ್ನು ಕಂಡಾಗಲೆಲ್ಲ ರಾಜಕುಮಾರ ಸಂತಾಪದಿಂದ 'ಅಯ್ಯೋ ದುಡುಕಿಬಿಟ್ಟೆ ಜಾನ್, ನನ್ನನ್ನು ಕ್ಷಮಿಸು' ಎಂದು ಪಶ್ಚಾತ್ತಾಪಪಡುತ್ತಿದ್ದನು.

ವರ್ಷಗಳುರುಳಿದವು. ರಾಜಕುಮಾರನೀಗ ದೇಶಕ್ಕೆ ರಾಜನಾಗಿದ್ದನು. ಮುದ್ದಾದ ಎರಡು ಮಕ್ಕಳಿಗೆ ತಂದೆಯಾಗಿದ್ದನು. ಒಂದು ದಿನ ರಾಜನ ಸಣ್ಣ ಮಕ್ಕಳಿಬ್ಬರೂ ಜಾನ್‌ನ ಪ್ರತಿಮೆಯ ಬಳಿ ಆಟವಾಡುತ್ತಿದ್ದರು. ಅಲ್ಲಿಗೆ ಬಂದ ರಾಜ ಆ ಪ್ರತಿಮೆಯನ್ನು ಕಂಡು, 'ಅಯ್ಯೋ ಪ್ರಿಯ ಜಾನ್, ನಿನ್ನನ್ನು ಮತ್ತೆ ಬದುಕಿಸಲು ನನ್ನಿಂದ ಸಾಧ್ಯವಾದರೆ ಎಷ್ಟು ಚೆನ್ನ! ಎಂದು ಉದ್ಗಾರ ತೆಗೆದನು. ತಕ್ಷಣ ಪ್ರತಿಮೆಯೊಳಗಿಂದ, 'ಸಾಧ್ಯ ಪ್ರಭು. ನಿಮ್ಮ ಮಕ್ಕಳಿಬ್ಬರನ್ನು ನೀವು ತ್ಯಜಿಸಿದರೆ ನಾನು ಬದುಕುತ್ತೇನೆ' ಎಂಬ ಸ್ವರ ಕೇಳಿ ಬಂದಿತು. ರಾಜನ ಗುಂಡಿಗೆ ಹಾರಿತು. ಏನು? ಪ್ರಾಣಕ್ಕಿಂತಲೂ ಪ್ರಿಯರಾದ ತನ್ನ ಮಕ್ಕಳನ್ನು ತ್ಯಜಿಸುವುದೇ ಎಂದು ಸಂಕಟವಾಯಿತು. ಆದರೆ ಜಾನ್ ಮೂರು ಬಾರಿ ತನ್ನ ಪ್ರಾಣವನ್ನು ಕಾಪಾಡಿದುದು ನೆನಪಿಗೆ ಬಂದ ಕೂಡಲೇ ರಾಜ ದೃಢ ಮನಸ್ಸಿನಿಂದ, 'ಖಂಡಿತ ಜಾನ್, ನಾನು ಮಕ್ಕಳನ್ನು ತ್ಯಜಿಸುತ್ತೇನೆ. ನೀನು ಮತ್ತೆ ಬಾ' ಎಂದ ಕೂಡಲೇ ಪ್ರತಿಮೆಯೊಳಗಿಂದ ಜಾನ್ ಜೀವಂತವಾಗಿ ಹೊರಗೆ ಬಂದು, 'ಪ್ರಭು, ಮಕ್ಕಳನ್ನು ಇಟ್ಟುಕೊಳ್ಳಿ. ನಿಮ್ಮ ಸತ್ಯಕ್ಕೆ ಅದೇ ಬಹುಮಾನ' ಎಂದನು ನಗುತ್ತ.

ರಾಜನಿಗೆ ತುಂಬಾ ಸಂತೋಷವಾಯಿತು. ಅಷ್ಟರಲ್ಲಿ ತನ್ನ ರಾಣಿ ಬರುತ್ತಿರುವುದನ್ನು ಕಂಡು, ರಾಜ ಕೂಡಲೇ ಜಾನ್‌ನನ್ನೂ ಮಕ್ಕಳನ್ನೂ ಒಂದು ಕಪಾಟಿನಲ್ಲಿ ಬಚ್ಚಿಟ್ಟು ಜಾನ್ ತನ್ನನ್ನು ಪರೀಕ್ಷಿಸಿದಂತೆ ತಾನು ರಾಣಿಯನ್ನು ಪರೀಕ್ಷಿಸಿದನು. ಅವಳು ಕೊಂಚವೂ ಅನುಮಾನ ಪಡೆದೆ, 'ಖಂಡಿತ ಜಾನ್ ಬದುಕಬೇಕು. ಅದಕ್ಕಾಗಿ ಯಾವ ತ್ಯಾಗಕ್ಕೂ ನಾನು ಸಿದ್ಧ' ಎಂದಾಗ, ರಾಣಿಯೂ ತನ್ನಂತೆಯೇ ಆಲೋಚಿಸಿದ್ದಕ್ಕಾಗಿ ಅವನಿಗೆ ತುಂಬಾ ಸಂತೋಷವಾಗಿ ಕಪಾಟಿನ ಬಾಗಿಲನ್ನು ತೆಗೆದು, 'ನೋಡಿಲ್ಲಿ ರಾಣಿ! ನಮ್ಮ ಪ್ರೀತಿಯ ಜಾನ್, ನಮ್ಮ ಮುದ್ದು ಮಕ್ಕಳು ಎಲ್ಲರೂ ನಮ್ಮೊಂದಿಗೇ ಇದ್ದಾರೆ' ಎಂದು ಹರ್ಷದಿಂದ ಕೂಗಿ, ಅವಳಿಗೆ ಎಲ್ಲ ಕತೆಯನ್ನೂ ಹೇಳಿದನು. ನಂತರ ಅವರೆಲ್ಲರೂ ಬಹಳ ಕಾಲ ಸುಖವಾಗಿದ್ದರು.